## ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ (ನಿ.) ಬಳ್ಳಾರಿ ಜಿಲ್ಲೆ.

**2020-21ನೇ ಸಾಲಿನ ಸ್ವಯಂ ಉದ್ಯೋಗ ಹಾಗೂ ಅರಿವು ಸಾಲ ಯೋಜನೆಯಲ್ಲಿ ಫಲಾನುಭವಿಗಳನ್ನು ಲಾಟರಿ ಮುಖಾಂತರ ಆಯ್ಕೆ ಮಾಡಲು ದಿನಾಂಕ:-07/11/2020 ರಂದು ಬೆಳ್ಳಿಗ್ಗೆ 11.00 ಗಂಟೆಗೆ ನಡೆದ ಆಯ್ಕೆ ಸಮಿತಿ ಸಭೆಯ ನಡವಳಿಗಳು:**

| ಕ್ರ.ಸಂ | ಆಯ್ಕೆ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು | ಪದನಾಮ |
|---|---|---|
| 1. | ಮಾನ್ಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ. | ಅಧ್ಯಕ್ಷರು |
| 2. | ಉಪ ಕಾರ್ಯದರ್ಶಿಗಳು ಆಡಳಿತ ವಿಭಾಗ ಜಿಲ್ಲಾ ಪಂಚಾಯತ್ ಬಳ್ಳಾರಿ. (ವಿಶೇಷ ಆಹ್ವಾನಿತರು). | ಸದಸ್ಯರು |
| 3. | ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಬಳ್ಳಾರಿ. | ಸದಸ್ಯರು |
| 4. | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಳ್ಳಾರಿ. | ಸದಸ್ಯರು |
| 5. | ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬಳ್ಳಾರಿ. | ಸದಸ್ಯರು |
| 6. | ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ. | ಸದಸ್ಯರು |
| 7. | ಸಹಕಾರ ಸಂಘಗಳ ಉಪನಿಬಂಧಕರು, ಬಳ್ಳಾರಿ. | ಸದಸ್ಯರು |
| 8. | ಜನರಲ್ ಮ್ಯಾನೇಜರ್ (ಸೂಪರಿಂಟೆಂಡೆಂಟ್ ಇಂಜಿನಿಯರಿಂಗ್ ವಿದ್ಯುತ್ ಸರಬರಾಜು ಕಂಪನಿ), ಬಳ್ಳಾರಿ. | ಸದಸ್ಯರು |
| 09. | ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ. ಬಳ್ಳಾರಿ. | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಹಾಗೂ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಆಗಮಿಸಿದ ಆಯ್ಕೆ ಸಮಿತಿ ಅದ್ಯಕ್ಷರನ್ನು ಹಾಗೂ ಆಯ್ಕೆ ಸಮಿತಿಯ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಿಗಮದ ಕೇಂದ್ರ ಕಛೇರಿ ಕ್ರಿಯಾ ಯೋಜನೆಯನ್ವಯ ಈ ಕೆಳಕಂಡಂತೆ ಯೋಜನಾವಾರು ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗದಿಪಡಿಸಿ ಹಾಗೂ ಮಹಿಳೆಯರಿಗೆ ಶೇ:33 ರಷ್ಟು ಮತ್ತು ಅಂಗವಿಕಲರಿಗೆ ಶೇ:5 ರಷ್ಟು ಮೀಸಲು ನಿಗದಿಪಡಿಸಿ ಕ್ರಿಯಾ ಯೋಜನೆಯನ್ನು ನೀಡಿರುತ್ತಾರೆ. ಅದರಂತೆ ಅರ್ಹ ಅರ್ಜಿದಾರರಿಂದ ಅರ್ಜಿಗಳನ್ನು ಆಹ್ವಾನಿಸಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿರುತ್ತದೆ. ಇದರನ್ವಯ ಯೋಜನವಾರು ಅರ್ಜಿಗಳು ಸ್ವೀಕೃತಗೊಂಡಿರುತ್ತವೆ ಎಂದು ಸಭೆಗೆ ವಿವರಿಸಿದರು.

| ಕ್ರ.ಸಂ | ಯೋಜನೆಯ ಹೆಸರು | ನಿಗದಿಪಡಿಸಿದ ಒಟ್ಟು ಜಿಲ್ಲೆಯ ಗುರಿ | | ಸ್ವೀಕರಿಸಿದ ಅರ್ಜಿಗಳ ಸಂಖ್ಯೆ |
|---|---|---|---|---|
| | | ಭೌತಿಕ | ಆರ್ಥಿಕ | |
| 1 | ಸ್ವಯಂ ಉದ್ಯೋಗ | 24 | 12.00 | 127 |
| 2 | ಅರಿವು ಶೈಕ್ಷಣಿಕ | 02 | 1.16 | 02 |
| | ಒಟ್ಟು:- | 26 | 13.16 | 129 |

1. **ಸ್ವಯಂ ಉದ್ಯೋಗ ಯೋಜನೆ**

2020-21ನೇ ಸಾಲಿಗೆ ಹಿಂದುಳಿದ ವರ್ಗಗಳ ಪ್ರವರ್ಗ 1ರಲ್ಲಿ ಬರುವ ಉಪ್ಪಾರ ಮತ್ತು ಇದರ ಉಪಜಾತಿಗಳು ಸ್ವಯಂ ಉದ್ಯೋಗಕ್ಕೆ ವ್ಯಾಪಾರ, ಕೈಗಾರಿಕೆ, ಸಾರಿಗೆ ಮತ್ತು ಸೇವಾ ವಲಯ, ಸಾಂಪ್ರದಾಯಿಕ ವೃತ್ತಿಗಳು ಹಾಗೂ ವೃತ್ತಿ ಕಸಬುದಾರರಿಗೆ ಕೈಗೊಳ್ಳಲು ಆರ್ಥಿಕ ಚಟುವಟಿಕೆಗಳನುಸಾರವಾಗಿ ಘಟಕ ವೆಚ್ಚ ರೂ.50,000/- ಗಳಿಗೆ ಶೇ.30ರಷ್ಟು ಗರಿಷ್ಠ ರೂ.10,000/- ಗಳ ಸಹಾಯ ಧನ ಉಳಿಕೆ ಶೇ.70%ರಷ್ಟು ಗರಿಷ್ಠ ರೂ.40,000/- ಗಳ ಶೇ.4%ರ

ಬಡ್ಡಿಯ ಧರದಲ್ಲಿ ಸಾಲ ಸೌಲಭ್ಯ ಒದಗಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಮುಂದುವರೆದು ಮೇಲ್ಕಂಡ ಯೋಜನಾವಾರು ನಿಗದಿಪಡಿಸಿದ ಗುರಿಯನ್ನು ಹಾಗೂ ಸ್ವೀಕರಿಸಿದ ಯೋಜನಾವಾರು ಅರ್ಜಿಗಳನ್ನು ವಿಂಗಡಿಸಿ ಅವುಗಳಲ್ಲಿ ಪುರುಷ ಮತ್ತು ಮಹಿಳೆಯರನ್ನು ಆಯ್ಕೆ ಮಾಡಲು ಈ ಕೆಳಕಂಡಂತೆ ವಿಂಗಡಿಸಲಾಗಿರುತ್ತದೆ ಎಂದು ಸಭೆಗೆ ವಿವರಿಸಿದರು. ಹಾಗೂ ವಿಧಾನಸಭಾ ಕ್ಷೇತ್ರವಾರು ನಿಗದಿಪಡಿಸಿದ ಗುರಿಯನ್ವಯ ಪುರುಷ ಮತ್ತು ಮಹಿಳೆಯರನ್ನು ಲಾಟರಿ ಮುಖಾಂತರ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭ ಮಾಡುವ ಬಗ್ಗೆ ಸಭೆಗೆ ಕೋರಿದರು.

| ಕ್ರಸಂ | ಜಿಲ್ಲೆಯ ಒಟ್ಟು ಭೌತಿಕ ಗುರಿ | ಜಿಲ್ಲೆಯ ಆರ್ಥಿಕ ಗುರಿ | ವಿಧಾನಸಭಾ ಕ್ಷೇತ್ರದ ಹೆಸರು | ಸ್ವೀಕರಿಸಿದ ಅರ್ಜಿಗಳ ವಿವರ | ಮತಕ್ಷೇತ್ರವಾರು ನಿಗದಿಪಡಿಸಿದ ಗುರಿ | ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ | |
|---|---|---|---|---|---|---|---|
| | | | | | | ಪುರುಷ | ಮಹಿಳೆ |
| 1 | 24 | 12.00 | ಸಿರುಗುಪ್ಪ | 21 | 03 | 02 | 01 |
| 2 | | | ವಿಜಯನಗರ | 03 | 01 | 01 | 00 |
| 3 | | | ಸಂಡೂರು | 27 | 03 | 00 | 03 |
| 4 | | | ಬಳ್ಳಾರಿ ನಗರ | 08 | 02 | 02 | 00 |
| 5 | | | ಬಳ್ಳಾರಿ ಗ್ರಾಮಾಂತರ | 27 | 04 | 01 | 03 |
| 6 | | | ಕೂಡ್ಲಿಗಿ | 07 | 02 | 01 | 01 |
| 7 | | | ಕಂಪ್ಲಿ | 13 | 03 | 02 | 01 |
| 8 | | | ಹಗರಿಬೊಮ್ಮನಹಳ್ಳಿ | 08 | 02 | 01 | 01 |
| 9 | | | ಹಡಗಲಿ | 01 | 01 | 01 | 00 |
| 10 | | | ಹರಪನಹಳ್ಳಿ | 12 | 03 | 01 | 02 |
| | 24 | 12.00 | ಒಟ್ಟು:- | 127 | 24 | 12 | 12 |

ಸಮಿತಿಯು ಸ್ವೀಕೃತಗೊಂಡ ಅರ್ಜಿಗಳ ವಿವರಗಳನ್ನು ಪರಿಶೀಲಿಸಿ ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಹಂಚಿಕೆಮಾಡಿ ಅಂಗವಿಕಲರಿಗೆ ಶೇ:5 ರಷ್ಟು ಮೀಸಲು ನಿಗದಿಪಡಿಸಿ ಫಲಾನುಭವಿಗಳನ್ನು ಆಯ್ಕೆಮಾಡಲಾಯಿತು. ಜಿಲ್ಲೆಯ ಗುರಿಯನ್ವಯ ಫಲಾನುಭವಿಗಳನ್ನು ಆಯ್ಕೆ ಮಾಡುವಂತೆ ತಿರ್ಮಾನಿಸಲಾಯಿತು. ಅದರಂತೆ ಲಾಟರಿ ಪ್ರಕ್ರಿಯೆಯನ್ನು ಪ್ರಾರಂಭಿಸಿ ವಿಧಾನಸಭಾ ಕ್ಷೇತ್ರವಾರು ಪುರುಷ ಮತ್ತು ಮಹಿಳೆಯರು ಒಟ್ಟು 24 ಫಲಾನುಭವಿಗಳನ್ನು ಲಾಟರಿ ಮುಖಾಂತರ ಆಯ್ಕೆ ಮಾಡಲಾಗಿ ಆಯ್ಕೆ ಪ್ರಕ್ರಿಯೆಯನ್ನು ವೀಡಿಯೋ ರೆಕಾರ್ಡಿಂಗ್ ಮಾಡಲಾಯಿತು. (ಲಾಟರಿ ಮುಖಾಂತರ ಆಯ್ಕೆಯಾದ ಫಲಾನುಭವಿಗಳ ವಿವರಗಳನ್ನು ಅನುಬಂಧ-01 ರಲ್ಲಿ ಲಗತ್ತಿಸಿದೆ.)

2. <u>ಅರಿವು/ಶೈಕ್ಷಣಿಕ ಸಾಲ ಯೋಜನೆ:-</u>

ಹಿಂದುಳಿದ ವರ್ಗಗಳ ಪ್ರವರ್ಗ 2ಎ 1ರಲ್ಲಿ ಬರುವ ಉಪ್ಪಾರ ಮತ್ತು ಇದರ ಉಪಜಾತಿಗಳ ವಿದ್ಯಾರ್ಥಿಗಳಿಗೆ ಶೈಕ್ಷಣಾಭಿವೃದ್ಧಿಗಾಗಿ ಆರ್ಥಿಕ ನೆರವು ಸಾಲದ ಮೊತ್ತ ವಾರ್ಷಿಕ 1.00 ಲಕ್ಷಗಳಂತೆ ಕೋರ್ಸ್ ಅವಧಿಗೆ ಗರಿಷ್ಠ ರೂ.4.00 ರಿಂದ 5.00 ಲಕ್ಷಗಳ ವರೆಗೆ ಶೇ.2%ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸಲಾಗುವುದು. ಹಾಗೂ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ. ಪೋಸ್ಟ್ ಡಾಕ್ಟೋರೇಲ್ ಮತ್ತು ಮಾಸ್ಟರ್ ಡಿಗ್ರಿ ಹಾಗೂ ತಾಂತ್ರಿಕ ಮತ್ತು ವೈದ್ಯಕೀಯ ಇತ್ಯಾದಿ ಉನ್ನತ ಕೋರ್ಸ್‌ಗಳ ವ್ಯಾಸಂಗಕ್ಕೆ ವಾರ್ಷಿಕ ಗರಿಷ್ಠ ರೂ.5.00 ಲಕ್ಷಗಳಂತೆ 3 ವರ್ಷಗಳ ಅವಧಿಗೆ ಶೇ.2%ರ ಬಡ್ಡಿ ದರದಲ್ಲಿ 15.00 ಲಕ್ಷಗಳವರೆಗೆ ಸಾಲ ಒದಗಿಸಲಾಗುವುದು ಎಂದು ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಮುಂದುವರೆದು 2020-21ನೇ ಸಾಲಿಗೆ ಸದರಿ ಯೋಜನೆಯಡಿ ನಿಗದಿಪಡಿಸಿದ ಗುರಿ ಹಾಗೂ ಕೋರಿ ಬಂದ ಅರ್ಜಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಜಿಲ್ಲೆಯ ಒಟ್ಟು ಭೌತಿಕ ಗುರಿ | ಜಿಲ್ಲೆಯ ಒಟ್ಟು ಆರ್ಥಿಕ ಗುರಿ | ವಿಧಾನಸಭಾ ಕ್ಷೇತ್ರದ ಹೆಸರು | ಸ್ವೀಕರಿಸಿದ ಅರ್ಜಿಗಳ ವಿವರ | ಆಯ್ಕೆ ಮಾಡಬೇಕಾದ ಫಲಾನುಭವಿಗಳ ಸಂಖ್ಯೆ |
|---|---|---|---|---|---|
| 01 | 02 | 1.16 | ಬಳ್ಳಾರಿ ಗ್ರಾಮಾಂತರ | 01 | 01 |
| 02 | | | ಹರಪನಹಳ್ಳಿ | 01 | 01 |
| | 02 | 1.16 | ಒಟ್ಟು:- | 02 | 02 |

ಜಿಲ್ಲಾ ಆಯ್ಕೆ ಸಮಿತಿಯು ಸದರಿ ಯೋಜನೆಯಡಿ ಕೋರಿ ಬಂದ ಅರ್ಜಿಯನ್ನು ಪರಿಶೀಲಿಸಿ ಗುರಿಗೆ ಅನುಗುಣವಾಗಿ ಬಂದಿರುವ 02 ಅರ್ಜಿಗಳನ್ನು ಗಮನಿಸಿದರು. ಸದರಿ ಜಿಲ್ಲಾ ಆಯ್ಕೆ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಜಿಲ್ಲಾ ಉಪಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್ ಬಳ್ಳಾರಿ. ಕೋರಿ ಬಂದ ಅರ್ಜಿಗಳ ವಿವರಗಳನ್ನು ಪಡೆದು ಗುರಿಗೆ ತಕ್ಕಂತೆ ಅರ್ಜಿಗಳು ಬಂದಿರುವುದರಿಂದ ಸ್ವೀಕೃತಗೊಂಡ 02 ಅರ್ಜಿಗಳನ್ನು ಆಯ್ಕೆ ಮಾಡಲಾಯಿತು. ಮುಂದುವರೆದು ಸದರಿ ಯೋಜನೆಯಡಿ ನಿಗದಿಪಡಿಸಿದ ಗುರಿಯನ್ನು ಪೂರ್ಣಗೊಳಿಸಲು ಮುಂದೆ ಬರುವಂತಹ ಅರ್ಜಿಗಳನ್ನು ಕೇಂದ್ರ ಕಛೇರಿಗೆ ಕಳುಹಿಸಿಕೊಡುವ ಪ್ರಸ್ತಾವನೆಗಳಿಗೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸಹಿ ಮಾಡಿ ಕಳುಹಿಸಿಕೊಡುವಂತೆ ಸಮಿತಿಯು ಸರ್ವಾನುಮತದಿಂದ ಅಧಿಕಾರವನ್ನು ನೀಡಲಾಯಿತು. (ವಿವರಗಳನ್ನು ಅನುಬಂಧ-02 ರಲ್ಲಿ ಲಗತ್ತಿಸಿದೆ.)

ಈ ಮೇಲಿನ ಯೋಜನೆಗಳಲ್ಲಿ ಆಯ್ಕೆ ಮಾಡಲಾದ ಫಲಾನುಭವಿಗಳ ಪಟ್ಟಿಗಳ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಸಹಿ ಮಾಡುವುದೆಂದು ಹಾಗೂ ಅನುಮೊದಿತ ಪಟ್ಟಿಯೋಂದಿಗೆ ಹಣ ಬಿಡುಗಡೆಗಾಗಿ ಸಾಲ ಮಂಜೂರಾತಿ ಅದೇಶಗಳನ್ನು ಸದಸ್ಯ ಕಾರ್ಯದರ್ಶಿಗಳಿಗೆ ಸಹಿ ಮಾಡಿ ಕಳುಹಿಸಿ ಕೊಡಲು ಆಯ್ಕೆ ಸಮಿತಿಗೆ ಒಪ್ಪಿಗೆ ನೀಡಲಾಯಿತು. ಪ್ರಸಕ್ತ ಸಾಲಿಗೆ ನಿಗದಿಪಡಿಸಿದ ಭೌತಿಕ & ಆರ್ಥಿಕ ಗುರಿಯನುಸಾರ ಆಯ್ಕೆ ಪಟ್ಟಿಯನ್ನು ಮತ್ತು ಆಯಾ ಯೋಜನೆಯಲ್ಲಿ ಕಾಯ್ದಿರಿಸಿದ/ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳನ್ನು ಮತ್ತು ಆಯ್ಕೆ ಪಟ್ಟಿಯಲ್ಲಿರುವವರು ಯಾವುದಾದರೂ ಕಾರಣದಿಂದ ಮುಂದಿನ ದಿನಗಳಲ್ಲಿ ರದ್ದು ಮಾಡುವ ಸಂದರ್ಭ ಬಂದರೆ ಕಾಯ್ದಿರಿಸಿದ/ಹೆಚ್ಚುವರಿ ಪಟ್ಟಿಯಲ್ಲಿರುವವರಲ್ಲಿ ಜೇಷ್ಠತೆಯನುಸಾರ ಪರಿಗಣಿಸಿ ಸಾಲ/ಸೌಲಭ್ಯ ಬಿಡುಗಡೆಗೆ ಪ್ರಸ್ತಾವನೆಗಳನ್ನು ಕಳುಹಿಸಲು ಜಿಲ್ಲಾ ವ್ಯವಸ್ಥಾಪಕರಿಗೆ ಅಧಿಕಾರ ನೀಡುವುದೆಂದು ಸಮಿತಿಯು ನಿರ್ಣಯಿಸಿತು.

ಮತ್ತು ಚರ್ಚಿಸಲು ಹೆಚ್ಚಿನ ವಿಷಯಗಳು ಇಲ್ಲದಿರುವುದರಿಂದ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಲಾಯಿತು.

S. Hkandi (signature)

ಉಪಕಾರ್ಯದರ್ಶಿಗಳು (ಆಡಳಿತ)
ಜಿಲ್ಲಾ ಪಂಚಾಯತ್ ,
ಬಳ್ಳಾರಿ.

(signature)

ಸದಸ್ಯ ಕಾರ್ಯದರ್ಶಿ
ಆಯ್ಕೆ ಸಮಿತಿ,
ಜಿಲ್ಲಾ ವ್ಯವಸ್ಥಾಪಕರು, ಕ.ಉ.ಸಿ.ಡಿ.ಸಿ,
ಬಳ್ಳಾರಿ ಜಿಲ್ಲೆ

(signature)

ಅಧ್ಯಕ್ಷರು
ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಕ.ಉ.ಸಿ.ಡಿ.ಸಿ,
ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ.

2020-21 ನೇ ಸಾಲಿನ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ(ನಿ) ಮತ್ತು ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ(ನಿ)ದ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲು ಜಿಲ್ಲಾ ಆಯ್ಕೆ ಸಮಿತಿ ದಿನಾಂಕ -07-11-2020 ರಂದು ಬೆಳಿಗ್ಗೆ -11- ಗಂಟೆಗೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬಳ್ಳಾರಿರವರ ಅಧ್ಯಕ್ಷತೆಯಲ್ಲಿ ನೂತನ ಜಿ.ಪಂ. ಸಭಾಂಗಣದಲ್ಲಿ ಜರುಗಿದ ಸಭೆಗೆ ಹಾಜರಾದ ಸದಸ್ಯರುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಅಧಿಕಾರಿಗಳ ಹೆಸರು | ಪದನಾಮ | ಸಹಿ |
|---|---|---|---|
| 01 | ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬಳ್ಳಾರಿ | ಅಧ್ಯಕ್ಷರು | [signature] |
| 02 | ಮಾನ್ಯ ಉಪಕಾರ್ಯದರ್ಶಿಗಳು -I ಜಿಲ್ಲಾ ಪಂಚಾಯತ ಬಳ್ಳಾರಿ | ವಿಶೇಷ ಆಹ್ವಾನಿತರು | [signature] |
| 03 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು ಬಳ್ಳಾರಿ | ಸದಸ್ಯರು | [signature] |
| 04 | ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬಳ್ಳಾರಿ | ಸದಸ್ಯರು | |
| 05 | ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬಳ್ಳಾರಿ | ಸದಸ್ಯರು | [signature] |
| 06 | ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ ಬಳ್ಳಾರಿ | ಸದಸ್ಯರು | |

| | | | |
|---|---|---|---|
| 07 | ಸಹಕಾರ ಸಂಘಗಳ ಉಪನಿಬಂಧಕರು, ಬಳ್ಳಾರಿ | ಸದಸ್ಯರು. | |
| 08 | ಅಧೀಕ್ಷಕ ಇಂಜಿನಿಯರ್ ವಿದ್ಯುತ್ ಸರಬರಾಜು, ಜೆಸ್ಕಾಂ ಬಳ್ಳಾರಿ | ಸದಸ್ಯರು. | |
| 09 | ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ & ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ | ಸದಸ್ಯ ಕಾರ್ಯದರ್ಶಿಗಳು. | B.K.[illegible] (signature) |